Ref.No.54/2020

MW-1,

ದಿನಾಂಕಃ 17-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- 1 ನೇ ಪಾರ್ಟಿ ಪರವಾಗಿಃ ಶ್ರೀ. NN ವಕೀಲರಿಂದ

ನಾನು ಮೂರುವರೆ ವರ್ಷಗಳಿಂದ 2 ನೇ ಪಾರ್ಟಿ ಕಂಪನಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕಃ15-9-2021 ರಿಂದ ನಾನು ಸೀನಿಯರ್ ಆಫೀಸರ್ ಹೆಚ್ ಆರ್ ಮತ್ತು ಅಡ್ಮಿನಿಸ್ಟೇಷನ್ ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಈ ಕೇಸಿನ ಬಗ್ಗೆ ಖುದ್ದು ಮಾಹಿತಿ ಇಲ್ಲ ಆದರೆ ದಾಖಲಾತಿಗಳ ಆಧಾರದಲ್ಲಿ ಸಾಕ್ಷ್ಯ ಹೇಳುತಿದ್ದೇನೆ. ಸಂಧಾನಾಧಿಕಾರಿಗಳ ಸಭೆಗೆ 2 ನೇ ಪಾರ್ಟಿ ಪರವಾಗಿ ನಾನು ಹಾಜರಾಗಿರಲಿಲ್ಲ. ನಮ್ಮ ಹಳೆಯ ಮ್ಯಾನೇಜರ್ ಹಾಜರಾಗಿದ್ದರು. ಅಲ್ಲಿ ಏನು ನಡೆದಿತ್ತು ಎಂಬ ಬಗ್ಗೆ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಆದರೆ ದಾಖಲಾತಿಗಳ ಮೂಲಕ ತಿಳಿದುಕೊಂಡಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.4 ರಲ್ಲಿ ನಾನು ಉಲ್ಲೇಖಿಸಿರುವ ಎಂ ವಿ ಡಿ ಇ ವರ್ಕರ್ಸ ಅಸೋಸಿಯೇಶನ್ ನೊಂದಾಯಿಸಲ್ಪಟ್ಟ ಮತ್ತು ಮಾನ್ಯತೆ ಪಡೆದ ಕಾರ್ಮಿಕ ಸಂಘಟನೆ ಆಗಿರುವುದಿಲ್ಲ ಎಂಬ ಬಗ್ಗೆ ದಾಖಲೆಗಳನ್ನು ನಾನು ನೋಡಿಲ್ಲ ಆದರೆ ನಮ್ಮ ಮ್ಯಾನೇಜ್ಮೆಂಟ್ ಅದನ್ನು ಮಾನ್ಯ ಮಾಡಿಲ್ಲ. ಸದರಿ ಕಾರ್ಮಿಕ ಸಂಘದ ಸಂಘಟನೆಯು 2016 ರಲ್ಲಿ ನೊಂದಾಯಿಸಲ್ಪಟ್ಟಿದ್ದು ಅದನ್ನು ನಮ್ಮ ಮ್ಯಾನೇಜ್ಮೆಂಟಿಗೆ ಕೂಡ ತಿಳಿಸಿದ್ದಾರೆ ಅದು ನನಗೆ ಗೊತ್ತಿಲ್ಲ. ಅವರು ನಮ್ಮ ಮ್ಯಾನೇಜ್ಮೆಂಟಿಗೆ ನೊಂದಾಯಿಸಲ್ಪಟ್ಟ ವಿಚಾರವನ್ನು ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. 1 ನೇ ಪಾರ್ಟಿ ಕಾರ್ಮಿಕ ಸಂಘಟನೆಯು ನೊಂದಾಯಿಸಲ್ಪಟ್ಟ ಸಂಘಟನೆಯಾಗಿದ್ದರೂ ಕೂಡ ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 2007 ರಿಂದ 2 ನೇ ಪಾರ್ಟಿ ಕಂಪನಿಯು ಅಸ್ತಿತ್ವದಲ್ಲಿ ಇದೆ. ಈ ಕಾರ್ಮಿಕ ಸಂಘಟನೆಯು ಅಸ್ತಿತ್ವಕ್ಕೆ ಬರುವ ಮುಂಚೆ ಬೇರೆ ಕಾರ್ಮಿಕ ಸಂಘಟನೆಗಳು ನಮ್ಮಲ್ಲಿ ಇದ್ದವೆ ಎಂದು ನನಗೆ ಮಾಹಿತಿ ಇಲ್ಲ. 1 ನೇ ಪಾರ್ಟಿ ಕಾರ್ಮಿಕ ಸಂಘಟನೆಯು ನೊಂದಾಯಿತ ಸಂಘಟನೆಪಿ ಆಗಿರುವುದರಿಂದ ಕಾರ್ಮಿಕರು ಸದರಿ ಸಂಘಟನೆಯ ಮೂಲಕ ತಮ್ಮ ಬೇಡಿಕೆಗಳನ್ನು ನೀಡುತ್ತಿದ್ದಾರೆ ಎಂದರೆ ಸರಿ. ನಮ್ಮ ಕಂಪನಿಯಲ್ಲಿ ಸುಮಾರು 400 ನೌಕರರು ಇದ್ದಾರೆ. ಅವರಲ್ಲಿ 72 ಮಂದಿ ಸ್ಟಾಫ್ 101 ಖಾಯಂ ಕಾರ್ಮಿಕರು, ಉಳಿದವರು ಅಪ್ರೆಂಟೀಸ್ ಟ್ರೇನೀಗಳು ಮತ್ತು ಕಾಟ್ರಾಕ್ಟ ಮೇಲೆ ಕೆಲಸ ಮಾಡುವವರಾಗಿರುತ್ತಾರೆ. 101 ಖಾಯಂ ಕಾರ್ಮಿಕರಲ್ಲಿ 24 ಸೂಪರ್ವೈಸರ್ಗಳು ಇರುತ್ತಾರೆ ಉಳಿದವರು ಆಪರೇಟರ್ ಮತ್ತು ಎಫ್ ಟಿ ಇ ಅಂಡ್ ಸಿ ಟಿ ಆಗಿರುತ್ತಾರೆ. ನಮ್ಮಲ್ಲಿ ಕಾರ್ಮಿಕ ಸಂಘಟನೆ ಆರಂಭವಾದಾಗ 50 ಜನ ಸದಸ್ಯರು ಇದ್ದರು ಎಂದರೆ ಗೊತ್ತಿಲ್ಲ. ಕಾರ್ಮಿಕ ಸಂಘಟನೆಯ ಅಧ್ಯಕ್ಷರು, ಕಾರ್ಯದರ್ಶಿಯವರು ಮತ್ತು ಸದಸ್ಯರು ಬೇಡಿಕೆ ಪಟ್ಟಿ (ಸಿ.ಒ.ಡಿ.)ಗೆ ಸಹಿ ಹಾಕಿರುತ್ತಾರೆ. ಪೂರ್ವಭಾವಿ ಸಭೆ ಮಾಡಿದಾಗ ಈ ವಿಚಾರದಲ್ಲಿ ನಿಶಾನೆ ಡಬ್ಲ್ಯೂ-35 ರಂತೆ ಕಾರ್ಮಿಕರು ಸಹಿ ಹಾಕಿರುತ್ತಾರೆ. ಸಂಧಾನ ಸಭೆಯನ್ನು ಕರೆದಾಗ ಆರಂಭದಲ್ಲಿ 4-5 ಸಭೆಗಳಿಗೆ ಮ್ಯಾನೇಜ್ಮೆಟ್ ರವರು

Ref.No.54/2020
MW-1,

ಹಾಜರಾಗಿರಲಿಲ್ಲ ಎಂದರೆ ನಿಜ. ಆದರೆ ಅವಕ್ಕೆ ಕಾರಣಗಳಿವೆ. ಆ ಕಾರಣಗಳನ್ನು ನಂತರದ ಸಭೆಯಲ್ಲಿ ಹೇಳಿದ್ದಾರೆ. ಸಂಧಾನ ಸಭೆಯು ಸುಮಾರು ಎರಡೂವರೆ ವರ್ಷಗಳ ಕಾಲ ನಡೆದಿತ್ತು. ದಿನಾಂಕಃ23-2-2018 ರಿಂದ 29-9-2020 ರವರೆಗೆ ಸಂಧಾನ ಸಭೆಯ ಸಭೆಗಳು ನಡೆದಿದ್ದವು.ನಮ್ಮ ಕಂಪನಿಗೆ ಆರ್ಥಿಕ ಸಮಸ್ಯೆಗಳಿವೆ ಆದ್ದರಿಂದ ಕಾರ್ಮಿಕರ ಬೇಡಿಕೆ ಪಟ್ಟಿಯನ್ನು ಚರ್ಚೆಗೆ ತಯಾರಿಲ್ಲ ಎಂದು ಸಭೆಯಲ್ಲಿ ತಿಳಿಸಲಾಗಿತ್ತು. ನಮ್ಮ ಕಂಪನಿಯ ಆರ್ಥಿಕ ಸಮಸ್ಯೆಗಳ ಬಗ್ಗೆ ದಾಖಲಾತಿಗಳನ್ನು ಎ ಎಲ್ ಸಿ ರವರ ಮುಂದೆ ಹಾಜರುಪಡಿಸಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿ ವರ್ಷ ನಮ್ಮ ಕಂಪನಿಯು ಪ್ರಾಫಿಟ್ ಅಂಡ್ ಲಾಸ್ ಅಕೌಂಟನ್ನು ನಿರ್ವಹಿಸುತ್ತದೆ ಎಂದರೆ ನಿಜ. ಈ ನ್ಯಾಯಾಲಯದ ಮುಂದೆ ಆಡಿಟ್ ಮಾಡಿದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ಕಂಪನಿಯು ಪ್ರತಿ ವರ್ಷ ಆನ್ಯುವಲ್ ಜನರಲ್ ಬಾಡಿ ಮೀಟಿಂಗ್ ನಡೆಸುತ್ತದೆ. ಆ ಮೀಟಿಂಗಿಗೆ ನಾನು ಹೋಗದೇ ಇರುವುದರಿಂದ ಅಲ್ಲಿ ಏನೆಲ್ಲಾ ಚರ್ಚೆಗಳು ನಡೆಯುತ್ತವೆ ಎಂಬ ಮಾಹಿತಿ ನನಗೆ ಇಲ್ಲ. ನಮ್ಮ ಕಂಪನಿ ಸೆಕ್ರೆಟರಿಯವರು ಅಲ್ಲಿ ಹೋಗುತ್ತಾರೆ. ಜನರಲ್ ಬಾಡಿ ಮೀಟಿಂಗಿನ ನಡವಳಿಕೆ ಪ್ರತಿ ನಮಗೆ ಬರುತ್ತದೆ ಆದರೆ ನಾನು ಅದನ್ನು ನೋಡಿಲ್ಲ.

(ಈ ಹಂತದಲ್ಲಿ ಮುಂದಿನ ಪಾಟೀ ಸವಾಲಿಗೆ ಶ್ರೀ. ಎನ್ ಎನ್ ವಕೀಲರು ಸಮಯ ಕೋರಿರುತ್ತಾರೆ, ಮುಂದೂಡಲಾಯಿತು)

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.